

ಅವಧಿಯಲ್ಲಿ ಕೈಲಾಸ ಪರ್ವತ ಸುತ್ತಲಿನ ಬೌದ್ಧ ಮಂದಿರ ಹಾಗೂ ಗೊಂಪಾಗಳಾದ ಚುಕ್ಕು, ಗೊಂಪಾ ನ್ಯಾರಿ ಸೊಂಗ್‌ಚು, ಸೆರುಂಗ್ ಗ್ಯಾಂಗ್‌ಜ್ರಾ, ದಿರುಪುಕ್, ಟ್ರೈಲಾಂಗ್ (**Chukku, Gompa nyari songchu, serung Gyangzra, Dirapuk, Trailong**) ಗೊಂಪಾಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುತ್ತಾರೆ.

ಹಿಂದೂ ಹಾಗೂ ಬೌದ್ಧ ಧರ್ಮೀಯರು ಪ್ರದಕ್ಷಿಣೆಯನ್ನು ಎಡದಿಂದ ಬಲಕ್ಕೆ (**Clock wise**) ಮಾಡುತ್ತಾರೆ. ಬಾಂಪೊ (**Bonpo**) ಧರ್ಮೀಯರು ಅಪ್ರದಕ್ಷಿಣೆ (**Anticlock wise**) ಕೈಗೊಳ್ಳುತ್ತಾರೆ ಎಂಬುದು ಇಲ್ಲಿ ಗಮನಾರ್ಹ. ಕೈಲಾಸ ಪರ್ವತದ ತಪ್ಪಲಿನ ದಕ್ಷಿಣ ಮುಖಭಾಗದಲ್ಲಿನ ಜಾರ್‌ಪೊಚೇ (**Jarpoche**) ಯಮದ್ವಾರ ಪ್ರದೇಶದಲ್ಲಿ ಪ್ರದಕ್ಷಿಣೆ ಮೊದಲುಗೊಳ್ಳುತ್ತದೆ. ಬೃಹದಾಕಾರದ ಅಲಂಕೃತಗೊಂಡ ಧ್ವಜಸ್ಥಂಭವನ್ನು ಸಾವಿರಾರು ಬೌದ್ಧ ಭಿಕ್ಕುಗಳು ಸೇರಿ ಹಗ್ಗಗಳ ಸಹಾಯದಿಂದ ಲಂಬಕೋನದಲ್ಲಿ ನಿಲ್ಲಿಸಿ ಪ್ರತಿಷ್ಠಾಪಿಸುತ್ತಾರೆ.

ಈ ಸಂದರ್ಭದಲ್ಲಿ ಬೌದ್ಧ ಗ್ರಂಥಗಳನ್ನು ಪಠಿಸುವುದಲ್ಲದೆ, ಬಣ್ಣ ಬಣ್ಣದ ಕಾಗದಗಳ ಮೇಲೆ ಬೌದ್ಧ ಮಂತ್ರವಾದ ಓಂ ಮನಿ , ಪೆನೆಹಂಗ್ (**Om Mani, Penehung**) ಮಂತ್ರವನ್ನು ಬರೆದು ಗಾಳಿಯಲ್ಲಿ ತೇಲಿಬಿಡುತ್ತಾರೆ. ಇದನ್ನು ವಿಂಡ್ ಹೊರ್ಸು (**wind horsu**) ಎಂದು ಕರೆಯಲಾಗುತ್ತದೆ.

ಬೌದ್ಧ ಪವಿತ್ರ ಮಂತ್ರಗಳ ಜೊತೆಗೆ ಟಿಬೆಟಿಯನ್ನರ ವಾದ್ಯಗಳಾದ ತುತ್ತೂರಿ, ತಾಳ, ಡಮರುಗ ಹಾಗೂ ಗಂಟೆಗಳ ಸುಸ್ವರ ಮುಗಿಲು ಮುಟ್ಟುತ್ತದೆ. ಇದೆಲ್ಲದರ ನಡುವೆ ಹಿಮಚ್ಛಾದಿತ ಕೈಲಾಸ ಪರ್ವತದ ಶಿರೋಭಾಗ ಭಕ್ತ ಸಮೂಹದ ಮಧ್ಯೆ ಮಿರಿ ಮಿರಿ ಕಂಗೊಳಿಸುತ್ತಾ ಭಕ್ತಿ ಭಾವೈಕ್ಯತೆಯ ಆವಾಸಸ್ಥಾನ ಅಮೂರ್ತ ಸಂಗಮವಾಗಿ ಇರುವಂತೆ ಅನಿಸುತ್ತದೆ. ಈ ಸಂದರ್ಭದಲ್ಲಿ ದೇಶ ವಿದೇಶಗಳಿಂದ ಚೀನಾ, ಬಾಂಗ್ಲಾದೇಶ, ಭಾರತ, ಟಿಬೆಟ್, ಥಾಯ್ಲೆಂಡ್, ಭೂತಾನ್, ಶ್ರೀಲಂಕ, ಬರ್ಮಾ ದೇಶಗಳ ಬೌದ್ಧ ಭಿಕ್ಕುಗಳು ಭೇಟಿ ನೀಡುತ್ತಾರೆ.

ಬೌದ್ಧ ಭಿಕ್ಕುಗಳು ಕೆಂಪು ವಸ್ತ್ರ ಹಾಗೂ ಟೋಪಿ ಧರಿಸಿ ಹಾಗೂ ಹೆಂಗಸರು ಸ್ಥಳೀಯ ವೇಷ ಭೂಷಣಗಳಿಂದ ಅಲಂಕೃತಗೊಂಡು ಪ್ರತಿಯೊಬ್ಬರಿಗೂ ಶುಭಾಶಯ ಹೇಳುತ್ತ ಸಡಗರದಿಂದ ಕುಣಿದು ನಲಿದು ಸಿಹಿ ಸೇವಿಸಿ ಸಂಭ್ರಮಿಸುತ್ತಾರೆ. ಈ ಸಮಯದಲ್ಲಿ ಸ್ಥಳೀಯ ಜಾನಪದ ನೃತ್ಯ ಮುಖವಾಡ ಕುಣಿತ (**Mark dance**) ಹಾಗೂ ಇತರ ಕಾರ್ಯಕ್ರಮಗಳು ವಿಜೃಂಬಣೆಯಿಂದ ಜರುಗುತ್ತವೆ.

ಮುಂಬರುವ ದಿನಗಳಲ್ಲಿ ಟಿಬೆಟ್‌ನ ನೆಲದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸುವಂತಾಗಿ ಉತ್ತಮ ಮಳೆ ಬೆಳೆ ಹವಾಮಾನ ಆಗಲೆಂದು ಸಾಕ್ಯಮುನಿಯನ್ನು ಪ್ರಾರ್ಥಿಸುತ್ತಾರೆ.

**2014** ಇಸವಿಯನ್ನು **Horse year** ಎಂದು ಪರಿಗಣಿಸಿ ಸಾಗಾದಾವಾ ಹಬ್ಬವನ್ನು ಟಿಬೆಟ್ ಪ್ರಾಂತ್ಯದ ಕೈಲಾಸ ಪರ್ವತದಲ್ಲಿ **23** ದಿನಗಳ ಕಾಲ ಆಚರಿಸುತ್ತಾರೆ. ಈಗ ನಡೆದಿರುವ ಉತ್ಸವ ಜೂನ್ **12**ರವರೆಗೆ ನಡೆಯಲಿದೆ. **12** ವರ್ಷಕ್ಕೊಮ್ಮೆ **Horse year** ಬರುವುದರಿಂದ ಈ ಸಲ ಉತ್ಸವದ ಮಹತ್ವ ಹೆಚ್ಚಿದೆ.